**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 40 ಫ್ರಾ.ಸಾ. : 17**

ಸಾಕ್ಷಿಯ ಹೆಸರು : ಕನ್ನಾ
ತಂದೆಯ ಹೆಸರು : ಹನುಮಾ ನಾಯ್ಕು
ವಯಸ್ಸು : 70 ವರ್ಷ
ಉದ್ಯೋಗ : ದನ ಕಾಯುವುದು
ವಾಸ : ಕಾನಗೋಡು , ಸಿದ್ದಾಪುರ ತಾಲೂಕು

**ದಿನಾಂಕಃ 21-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನನಗೆ ಬುದ್ಧಿ ಬಂದಾಗಿನಿಂದ ನಾನು ಕಾನಗೋಡು ಗ್ರಾಮದಲ್ಲಿ ವಾಸ ಇದ್ದೇನೆ. ನಾನು ಕಾನಗೋಡು ಗ್ರಾಮದಲ್ಲಿಯೇ ಜನಿಸಿರುತ್ತೇನೆ. ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಗೊತ್ತು . ಆರೋಪಿ ನಮ್ಮ ಗ್ರಾಮ ಪಂಚಾಯತಿಗೆ ಅಧ್ಯಕ್ಷ ಆಗಿದ್ದರು. ಯಾವ ಸಾಲಿನಲ್ಲಿ ಎಂದು ನೆನಪಿಲ್ಲ. 2001-02 ನೇ ಸಾಲಿನಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಸಹಾಯ ಧನ ಯೋಜನೆ ಇದ್ದದ್ದು ನನಗೆ ಗೊತ್ತಿಲ್ಲ. ಆ ಯೋಜನೆಯಲ್ಲಿ 210 ಫಲಾನುಭವಿಗಳು ಇದ್ದರು ಮತ್ತು ನಾನೂ ಅದರಲ್ಲಿ ಒಬ್ಬ ಫಲಾನುಭವಿಯಾಗಿದ್ದೆ ಎಂದರೆ ಗೊತ್ತಿಲ್ಲ. ಅದರಲ್ಲಿ ಪ್ರತಿಯೊಬ್ಬರಿಗೂ ರೂ. 3000/- ಸಹಾಯಧನ ಕೊಡುವಂತೆ ಇತ್ತು ಎಂದರೆ ನನಗೆ ಕೊಟ್ಟಿರುವುದಿಲ್ಲ. ಈ ಬಗ್ಗೆ ಪೊಲೀಸ್ ನವರು ನನ್ನಿಂದ ಮಾಹಿತಿ ಕೇಳಿಲ್ಲ. ಆರೋಪಿ ವಿರುದ್ಧ ಲೋಕಾಯುಕ್ತ ಪ್ರಕರಣ ಆಗಿರುವುದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ನಾನು ಪೊಲೀಸ್ ನವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ರೂ. 3000/- ಶೌಚಾಲಯ ಕಟ್ಟಿಸಿಕೊಳ್ಳಲು ಅನುದಾನ ಕೊಡಬೇಕಾಗಿತ್ತು ಮತ್ತು ನಾನು ಫಲಾನುಭವಿಯಾಗಿ ಆಯ್ಕೆಯಾಗಿದ್ದೆ ಆದರೆ ನನಗೆ ಸಹಾಯ ಧನ ಕೊಟ್ಟಿಲ್ಲ ಎಂದು ಪೊಲೀಸ್ ನವರಿಗೆ ಹೇಳಿಕೆ ಕೊಟ್ಟಿಲ್ಲ. ನಿ.ಪಿ. 53 ರಂತೆ ನಾನು ಪೊಲೀಸ್ ನವರಿಗೆ ಹೇಳಿಕೆ ಕೊಟ್ಟಿಲ್ಲ. ಆರೋಪಿ ನನ್ನ ಗ್ರಾಮದವನು ಆಗಿರುವ ಕಾರಣ ಅವರಿಗೆ ಬಚಾವು ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಎಚ್ ಎಂ ಜಿ ರವರು**

ಏನೂ ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ